ವಿಜಯವಾಣಿ
ಕನ್ನಡಿಗರ ಧ್ವನಿ

# ಕೆ.ಎಸ್.ನ. ವಿಚಾರ ಸಂಕಿರಣ

ಮೈಸೂರು ಮಲ್ಲಿಗೆ ಖ್ಯಾತಿಯ ಡಾ.ಕೆ.ಎಸ್. ನರಸಿಂಹಸ್ವಾಮಿ ಜನ್ಮಶತಮಾನೋತ್ಸವ ಹಿನ್ನೆಲೆಯಲ್ಲಿ ಜೈನ್ ವಿಶ್ವವಿದ್ಯಾನಿಲಯ ಹಾಗೂ ಸಾಹಿತ್ಯ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಜೆ.ಸಿ. ರಸ್ತೆಯಲ್ಲಿರುವ ಜೈನ್ ವಿ.ವಿ.ಯ ಸ್ಕೂಲ್ ಆಫ್ ಗ್ರಾಜುಯೇಟ್ ಸ್ಟಡೀಸ್ ಆವರಣದಲ್ಲಿ ಫೆ.15 ಹಾಗೂ 16ರಂದು ಕಾರ್ಯಕ್ರಮ ನಡೆಯಲಿದೆ. ಸಾಹಿತ್ಯ ಅಕಾಡೆಮಿ ಉಪಾಧ್ಯಕ್ಷ ಹಾಗೂ ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಲೇಖಕಿ ಡಾ. ಕಮಲಾ ಹಂಪನಾ ಆಶಯ ಭಾಷಣ ಮಾಡಲಿದ್ದಾರೆ.

ಭಾನುವಾರ ಬೆಳಗ್ಗೆ 11.15ರಿಂದ ಮಧ್ಯಾಹ್ನ 1ರತನಕ 'ಕೆ.ಎಸ್.ನ. ವ್ಯಕ್ತಿತ್ವ ಮತ್ತು ಕೃತಿಗಳು' ವಿಷಯದ ಮೇಲೆ ಎಂ.ವಿ. ವೆಂಕಟೇಶಮೂರ್ತಿ, ಎಂ.ಎಸ್. ಮೂರ್ತಿ ಪ್ರಬಂಧ ಮಂಡಿಸಲಿದ್ದಾರೆ. ಸಿನಿಮಾ ನಿರ್ದೇಶಕ ಹಾಗೂ ರಂಗಕರ್ಮಿ ಟಿ.ಎಸ್. ನಾಗಾಭರಣ ಗೋಷ್ಠಿ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 2.30ರಿಂದ 4ರ ತನಕ 'ಕೆ.ಎಸ್.ನ. ಕವಿತೆಗಳ ಅನುವಾದಗಳ ವಾಚನ' ಗೋಷ್ಠಿ ನಡೆಯಲಿದೆ. ಸಾಹಿತಿ ಸುಮತೀಂದ್ರ ನಾಡಿಗ ಅಧ್ಯಕ್ಷತೆ ವಹಿಸಲಿದ್ದು, ಕೊಂಕಣಿ, ಕನ್ನಡ, ತೆಲುಗು, ಹಿಂದಿ, ಇಂಗ್ಲಿಷ್, ತಮಿಳು, ಮಲಯಾಳ, ತುಳು, ಉರ್ದು ಭಾಷೆಗಳಲ್ಲಿ ಕೆ.ಎಸ್.ಎನ್. ಅವರ



ಕವಿತೆ ವಾಚನ ನಡೆಯಲಿದೆ.

ಫೆ.16ರಂದು ಬೆಳಗ್ಗೆ 11ರಿಂದ ನಡೆಯುವ ಮೂರನೇ ಗೋಷ್ಠಿಯಲ್ಲಿ 'ಕೆ.ಎಸ್.ನ. ಮತ್ತು ಕನ್ನಡ ಕಾವ್ಯ ಪರಂಪರೆ' ವಿಚಾರದಲ್ಲಿ ಗೋಷ್ಠಿ ನಡೆಯಲಿದ್ದು, ಶ್ರೀಧರ ಹೆಗಡೆ ಭದ್ರನ್, ಹೆಚ್. ಗಿರೀಶ್‌ರಾವ್, ಶ್ರೀಧರ ಬಳಗಾರ ವಿಷಯ ಮಂಡಿಸಲಿದ್ದಾರೆ. ಸಿ.ಎನ್. ರಾಮಚಂದ್ರನ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಧ್ಯಾಹ್ನ 2.30ರಿಂದ ನಡೆಯುವ ಕೊನೇ ಘೋಷ್ಠಿಯಲ್ಲಿ 'ಕೆ.ಎಸ್.ನ. ಸೃಜನಶೀಲ ಪ್ರತಿಸ್ಪಂದನೆ' ವಿಷಯದಲ್ಲಿ ಸ. ಉಷಾ, ಚಂದ್ರಶೇಖರ ತಾಳ್ಯ, ಜಯಂತ್ ಕಾಯ್ಕಿಣಿ, ಎಚ್.ಎಲ್. ಪುಷ್ಪಾ ವಿಷಯ ಮಂಡಿಸಲಿದ್ದು, ಡಾ.ಬಿ.ಆರ್. ಲಕ್ಷ್ಮಣರಾವ್ ಅಧ್ಯಕ್ಷತೆ ವಹಿಸಲಿದ್ದಾರೆ.